ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ, ೨೧ ನೇ ನವೆಂಬರ್ ೧೯೯೦ ಕಾರ್ತಿಕ ೩೦, ೧೯೧೨ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಮಾನ್ಯ ಎಂ. ಎಸ್. ಪಾಟೀಲ್‌ರವರೇ, ತಮ್ಮ ಜನ್ಮ ದಿನದ ಶುಭ ಸಂದರ್ಭದಲ್ಲಿ ಸದನದ ಪರವಾಗಿ ಹಾಗೂ ನನ್ನ ಪರವಾಗಿ ತಮಗೆ ಹಾರ್ದಿಕ ಶುಭಾಷಯಗಳು.

ಶ್ರೀ ಪಂಲ್ಲಾರಿಗೌಡ ಎಸ್. ಪಾಟೀಲ್.—ಧನ್ಯವಾದಗಳು

ಬೈಲಹೊಂಗಲದಲ್ಲಿ ೩೦ ಹಾಸಿಗೆಯುಳ್ಳ ಕಾಟೇಜ್ ಆಸ್ಪತ್ರೆಯ ನಿರ್ಮಾಣ

೨೨೮. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಗರದಲ್ಲಿ ಕಟ್ಟುತ್ತಿರುವ ೩೦ ಹಾಸಿಗೆಗಳ ಕಾಟೇಜ್ ಹಾಸ್ಪಿಟಲ್ ಕಟ್ಟಡದ ಕೆಲಸವು ಸ್ಥಗಿತಗೊಂಡ ಸಂಗತಿ (ಏಪ್ರಿಲ್ ೧೯೯೦ ರಿಂದ) ಈಚೆಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಏಪ್ರಿಲ್ ೯೦ ರಿಂದ ಇಲ್ಲಿಯವರೆಗೆ ಈ ಕೆಲಸಕ್ಕೆ ಖರ್ಚಾದ ಹಣವೆಷ್ಟು ?

ಇ) ಪ್ರಸ್ತುತ ಸಾಲಿನಲ್ಲಿ ಈ ಕೆಲಸಕ್ಕೆ ಹಣವೆಷ್ಟು ಒದಗಿಸಲಾಗಿದೆ ?

ಶ್ರೀಮತಿ ನಾಗರತ್ನಮ್ಮ ಕೆ. ಎಸ್. (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆ).—

ಅ) –ಇಲ್ಲ– ಏಕೆಂದರೆ ರೂ. ೧.೩೭ ಹಣ ಖರ್ಚು ಮಾಡಿದೆ.

ಆ) ರೂ. ೧.೩೭ ಲಕ್ಷ

ಇ) ರೂ. ೧೫.೦೦ ಲಕ್ಷ

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಈ ಕಾಟೇಜ್ ಹಾಸ್ಪಿಟಲ್ ಕಟ್ಟಡವನ್ನು ಕಟ್ಟಲು ಆಡಳಿತಾತ್ಮಕ ಮಂಜೂರಾತಿಯನ್ನು ಯಾವ ದಿನಾಂಕದಂದು ನೀಡಲಾಯಿತು ಈ ಕಟ್ಟಡವನ್ನು ಎಷ್ಟು ದಿವಸಗಳ ಒಳಗಾಗಿ ಕಟ್ಟಬೇಕೆಂದು ನಿರ್ಧರಿಸಲಾಗಿತ್ತು ಮತ್ತು ಕಳೆದ ೯ ತಿಂಗಳಿಂದ ಈ ಕಟ್ಟಡದ ಕೆಲಸವು ಯಾವುದೇ ರೀತಿಯಿಂದ ಆಗದಿರುವುದಕ್ಕೆ ಕಾರಣವೇನು ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಈ ಕಟ್ಟಡದ ಕೆಲಸಕ್ಕೆ ದಿನಾಂಕ ೩೧–೩–೯೦ರ ಅಂತ್ಯದವರೆಗೆ ೧೪.೫೦ ಲಕ್ಷ ರೂಪಾಯಿ ಖರ್ಚಾಗಿದೆ. ಸದರಿ ಕಟ್ಟಡಕ್ಕೆ ಜಿಲ್ಲಾ ಪರಿಷತ್ತಿನವರು ೯೦–೯೧ ರವರೆಗೆ ೧೫ ಲಕ್ಷ ರೂಪಾಯಿ ಒದಗಿಸಿದ್ದಾರೆ. ಏಪ್ರಿಲ್ ೯೦ ರಿಂದ ಸೆಪ್ಟೆಂಬರ್‌ವರೆಗೆ ೧.೩೭ ಲಕ್ಷವನ್ನು ಖರ್ಚು ಮಾಡಿದ್ದಾರೆ. ಕಟ್ಟಡದ ಕೆಲಸ ಪೂರ್ತಿಯಾದ ತಕ್ಷಣ ನಾವು ಕಟ್ಟಡ ತೆಗೆದುಕೊಂಡು ಅದನ್ನು ಸರಿ ಮಾಡಿ ಕೊಡುತ್ತೇವೆ.